ಮೊಕ್ಕಾಂ ಮೈಸೂರು, ತಾರೀಖು 24ನೆ ಜೂ॥ 1907.

ಕ್ಯಾಂಪು ನಂ. 13, ಬೆಂಗಳೂರು ಡಿವಿಜನಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟನ್ನು 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ ತೆಗೆದುಹಾಕಿದ ಪ್ರಯುಕ್ತ—

ಬೆಂಗಳೂರು ಡಿವಿಜನಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜ್ ವಿ॥ ಟಿ. ಪರಮಶಿವ ಐಯ್ಯರ್, ಬಿ. ಎ., ಯವರನ್ನು, ವಿ॥ ಎಸ್. ವೆಂಕಟವರ್ದ ಐಯ್ಯಂಗಾರ್ರು ಕೆಲಸದಿಂದ ನಿವೃತ್ತರಾಗುವ ತಾರೀಖು ಮೊದಲ್ಗೊಂಡು, ಮೈಸೂರು ಡಿವಿಜನಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜ್ಗಾಗಿ ನೇಮಕರ್ಮಾಡಿದೆ.

ಮೊಕಾಂ ಮೈಸೂರು, ತಾರೀಖು 24ನೆ ಜೂ॥ 1907.

ಕ್ಯಾಂಪು ನಂ. 18, ಸರ್ಕಾರಿ ಕೆಲಸವು ಸರಿಯಾಗಿ ನಡೆಯತಕ್ಕ ಬಗ್ಗೆ ಕೆಳಗೆ ಕಂಡ ಜುಡಿಷಲ್ ಅಧಿಕಾರಿಗಳ ವರ್ಗಾವರ್ಗಿಗಳನ್ನೂ, ಸ್ಥಳ ನಿರ್ಣಯಗಳನ್ನೂ 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ ಮಂಜೂರ್ಮಾಡಿದೆ:

(1) ಸಬ್ ಜಡ್ಜ್ ವಿ॥ ಮಿರ್ ಹಂಜಾಹುಸೇ, ಬಿ. ಎ., ಬಿ. ಎಲ್, ಮೈಸೂರಿಂದ ಶಿವಮೊಗ್ಗಕ್ಕೆ.

(2) ಸಬ್ ಜಡ್ಜ್ ವಿ॥ ಬಿ. ಎಸ್. ಕೃಷ್ಣಸ್ವಾಮಿ ಐಯ್ಯಂಗಾರ್, ಬಿ. ಎ., ಬಿ. ಎಲ್, ಶಿವಮೊಗ್ಗದಿಂದ ಮೈಸೂರಿಗೆ.

(3) ಚಿಕ್ಕಮಗಳೂರಿನ ಸಬ್ ಜಡ್ಜ್ ವಿ॥ ಡಿ. ಎಂ. ನರಸಿಂಗರಾವ್, ಬಿ. ಎ., ಬಿ. ಎಲ್, ರವಿನ್ಯೂ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ.

ತಾರೀಖು 21ನೆ ಜೂ॥ 1907.

ನಂ. ರೆ. 10846—ಲ್ಯಾ. ಸ. 75-06-2, ಸರ್ವೆ ಮತ್ತು ಸೆಟ್ಲ್ಮೆಂಟ್ ಕಮಿಷನರ್ ಮತ್ತು ಇನಾಂ ಸೆಟ್ಲ್ಮೆಂಟುಗಳ ಸೂಪರಿಟೆಂಡೆಂಟ್ ಕರ್ನಲ್ ಜೆ. ಪಿ. ಗ್ರ್ಯಾಂಟ್ ರವರು 1907ನೆ ಇಸವಿಯ ಜುಲೈ 1ನೆ ತಾರೀಖಿನಲ್ಲಿ ಕೆಲಸದಿಂದ ನಿವೃತ್ತರಾದಾಗ್ಗೆ, ಸರ್ವೆ ಮತ್ತು ಸೆಟ್ಲ್ಮೆಂಟು ಕಮಿಷನರ ಉದ್ಯೋಗವನ್ನು ತೆಗದುಹಾಕಬೇಕೆಂದೂ, ಮತ್ತು ಇನಾಂ ಇಲಾಖೆಯ ಚಾರ್ಜ್, ಹಂಗಾಮಿಯಾಗಿ ಅಥವಾ ಇನ್ನೊಂದು ಹುಕುಂ ಕೊಡುವವರೆಗೆ, ಸರ್ವೆ ಮತ್ತು ಸೆಟ್ಲ್ಮೆಂಟ್ ಸೂಪರಿಟೆಂಡೆಂಟಿಗೆ ವಹಿಸಲ್ಪಡಬೇಕೆಂದೂ ವಿಧಿಸಲು ಶ್ರೀಮನ್ ಮಹಾರಾಜರವರ ಸರ್ಕಾರದವರು ಆಜ್ಞಾಪಿಸಿರುತ್ತಾರೆ.

ತಾರೀಖು 27ನೆ ಜೂ॥ 1907.

ನಂ. ರೆ. 10902—ಲ್ಯಾ. ರೆ. 609-06-1, ಸರ್ಕಾರಿ ಕೆಲಸದ ಅನುಕೂಲತೆ ಬಗ್ಗೆ ಕೆಳಗೆ ಕಂಡ ಅಸಿಸ್ಟೆಂಟ್ ಕಮಿಷನರುಗಳ ವರ್ಗಾವರ್ಗಿಗಳನ್ನೂ ಸ್ಥಳ ನಿರ್ಣಯಗಳನ್ನೂ ಮಂಜೂರ್ಮಾಡಿದೆ:—

(1) ಡೆಪ್ಯುಟಿ ಕಮಿಷನರಾಗಿ ಬದಲಿ ನೇಮಕರ್ಮಾಡಲ್ಪಟ್ಟ, ವಿ॥ ಬಿ. ಜೆ. ಕೊಮಾರಸಾಮಿ ನಾಯಕರಿಗೆ ಬದಲಾಗಿ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್ ವಿ॥ ಟಿ. ಧರ್ಮರಾಜ ಶೆಟ್ಟರನ್ನು ಹಾಸನದಿಂದ ಚಿಕ್ಕಳಕೆರೆ ಸಬ್ ಡಿವಿಜನಿನ ಚಾರ್ಜ್ ಬಗ್ಗೆ ಚಿತ್ರದುರ್ಗಕ್ಕೆ. (ಬಡೆನೆಯೇ ಹೋಗಿ ಕೆಲಸದ ಮೇಲೆ ಹಾಜರಾಗತಕ್ಕದ್ದು.)

(2) ಶಿವಮೊಗ್ಗ ಡಿಸ್ಟ್ರಿಕ್ಟ್ನಲ್ಲಿ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರಾಗಿರುವ ವಿ॥ ಎ. ಕೃಷ್ಣಸಾಮೈಯ್ಯಂಗಾರ್, ಬಿ. ಎ. ಯವರನ್ನು, ಹಂಗಾಮಿಯಾಗಿ, ಖಜಾನೆಯ ಚಾರ್ಜಿನ ಬಗ್ಗೆ ಹಾಸನ ಡಿಸ್ಟ್ರಿಕ್ಟಿಗೆ. (ವಿ॥ ವೇದಾಂತ ದೇಶಿಗಂ ಐಯ್ಯಂಗಾರ್ರಿಂದ ಶಿವಮೊಗ್ಗೆಯ ಚಾರ್ಜ್ ವಹಿಸಲ್ಪಟ್ಟ ತರುವಾಯ ಈ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ತಾರೀಖು 8ನೆ ಜುಲೈ 1907.

ನಂ. ರೆ. 240—ಲ್ಯಾ. ರೆ. 21-07—1, ಸರ್ಕಾರಿ ಕೆಲಸದ ಅನುಕೂಲತೆ ಬಗ್ಗೆ ಇದರಡಿ ಕಂಡ ಅವ್ವಲ್ದಾರರುಗಳ ಮತ್ತು ಡೆಪ್ಯುಟಿ ಅವಲ್ದಾರರುಗಳ ವರ್ಗಾವರ್ಗಿಗಳನ್ನೂ, ಹಂಗಾಮಿ ನೇಮಕರಾತಿಗಳನ್ನೂ, ಸ್ಥಳ ನಿರ್ಣಯಗಳನ್ನೂ ಮಂಜೂರ್ಮಾಡಿದೆ:—

	ಎಲ್ಲಿಂದ.	ಎಲ್ಲಿಗೆ.
ವಿ॥ ಸಿ. ರಂಗನಾಥರಾವ್ ಸಾಹೆಬ್	... ದೊಡ್ಡಬಳ್ಳಾಪುರ	ಚನ್ನಪಟ್ಟಣ
,, ಎಂ. ಸದಾಶಿವರಾವ್	... ನೆಲಮಂಗಲ	ದೊಡ್ಡ ಬಳ್ಳಾಪುರ
,, ಸಿ. ಕೃಷ್ಣರಾವ್	... ಚಾಮರಾಜನಗರ	ನೆಲಮಂಗಲ
,, ಎಸ್. ವೆಂಕಟರಮಣ ಶಾಸ್ತ್ರಿ	... ಶ್ರೀನಿವಾಸಪುರ	ಚಾಮರಾಜನಗರ

ಬೆಂಗಳೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಶಿರಸ್ತೆದಾರ್, ವಿ॥ ವೈ. ನರಸಿಂಗರಾಯರು ಶ್ರೀನಿವಾಸಪುರ ತಾಲ್ಲೂಕಿನ ಅವಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೇಮಕತಕ್ಕದ್ದು.

	ಎಲ್ಲಿಂದ.	ಎಲ್ಲಿಗೆ.
ವಿ॥ ಸೈಯದ್ ಯಾಕೂಬ್	... ಶ್ರೀರಂಗಪಟ್ಟಣ	ಮೈಸೂರು
,, ಷೇಕ ಅಬ್ದುಲ್ಲಾ	... ಚನ್ನಗಿರಿ	... ಶ್ರೀರಂಗಪಟ್ಟಣ
,, ಬಿ. ಸಿ. ಕೇಶವಯ್ಯ	... ಮೊಳಕಾಲ್ಮೂರು	... ಚನ್ನಗಿರಿ.

ಮುಜರಾಯಿ ಸೆಕ್ರೆಟೇರಿಯವರ ಕಛೇರಿಯ ಮ್ಯಾನೇಜರ್ ಮಿ॥ ಎಸ್. ಶ್ರೀನಿವಾಸರಾಯರು ಮೊಳಕಾಲ್ಮುರು ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

ಎಲ್ಲಿಂದ.	ಎಲ್ಲಿಗೆ.
ಮಿ॥ ಎಚ್. ಖಾನವರ್ಾಜ ಅರಸು	ಹೊಸಕೋಟೆ ... ಮದ್ದಗಿರಿ.

ಕುಂಸಿಯಲ್ಲಿ ಡೆಪ್ಯುಟಿ ಅಮಲ್ದಾರ್ರಾದ ಮಿ॥ ಜಿ. ಮುರುಡಪ್ಪನವರು ಸೊರಬ ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

ಚೀಫ್ ಕೋರ್ಟಿನ ಡೆಪ್ಯುಟಿ ಟ್ರಾನ್ಸಲೇಟರ್ ಮಿ॥ ಎಂ. ಎಲ್. ಶಾಮೇಗೌಡರು ಕುಂಸಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

ಬೆಂಗಳೂರು ಮ್ಯುನಿಸಿಪಲ್ ಕಲೆಕ್ಟರ್ ಮಿ॥ ಎಂ. ರಾಮಚಂದ್ರರಾಯರು ನಗರ ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

ತುಮಕೂರು ಡೆಪ್ಯುಟಿ ಕಮಿಷನರ್ ಕಛೇರಿಯ ಹೆಡ್ ಕ್ಲಾರ್ಕ್ ಮಿ॥ ಟಿ. ಟಿ. ರಾಮಚಂದ್ರರಾಯರು ಕೊರಟಗೆರೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

ಕಡೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಶೆರಸ್ತೆದಾರ್ ಚಕ್ರಪಾಣಿ ಐಯ್ಯಂಗಾರ್ರು ಚಿಕ್ಕಮಗಳೂರು ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

ತಾರೀಖು 6ನೆ ಜುಲೈ 1907.

ನಂ: ರೆ. 232 —ಲ್ಯಾ. ರೆ. 2-07—3. ಸ್ಯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಮತ್ತು ಸುಮಾರು 13¼ ಗುಂಟೆಗಳ ವಿಸ್ತೀರ್ಣವುಳ್ಳ ಜಮೀನುಗಳು, ಸರ್ಕಾರಿ ಕೆಲಸಕ್ಕೆ ಎಂದರೆ ತುಮಕೂರು ತಾಲ್ಲೂಕು ತುಮಕೂರು ಅಮಾನಿಕೆರೆ ಗ್ರಾಮದಲ್ಲಿ ಸದರ್ಹಮರಾಟಾ ರೈಲ್ವೇ ರಸ್ತೆಯ 165—14-15ನೆ ಮೈಲಿಯಲ್ಲಿ ನೀರು ಸರಬರಾಯಿಗೆ ಕಾಯಂ ಏರ್ಪಾಟು ಮಾಡುವ ಬಗ್ಗೆ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಗುಬ್ಬಿ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ.	ಖಾತೇದಾರರ ಹೆಸರು	ಸರ್ವೆ ನಂಬರ್.	ಖರಾಬು ಅಥವಾ ತರಿ ಯಾ ಬಾಗಾಯಿತು	ಒಟ್ಟು ವಿಸ್ತೀರ್ಣ	ಕಂದಾಯ	ಈಗ ಸರಕಾರಕ್ಕೆ ಬೇಕಾದ ವಿಸ್ತೀರ್ಣ	ಚತುರ್ಗಡಿ.			
										ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಆ.	ಎ. ಗು.				
ತುಮಕೂರು	ತುರುವೇಕೆರೆ	ತುರುವೇಕೆರೆ	ಅಮಾನಿಕೆರೆ	ಅಬ್ದುಲ್ ಕರೀಂ ಖರ್ಬ.	91	ತರ ...	3 32	27 0	0 3¼	ಸರ್ವೆ ನಂ. 94 93 — ; — 2 2	ಸರ್ವೆ ನಂ. 91	ಸರ್ವೆ ನಂ. 91	ರೈಲ್ವೆಯು ರಸ್ತೆ ಖರಾಬು ಜಮೀನು.
				ವೀರಪಟ್ಟ	92	ಡಿಟೋ	4 17	27 6	0 ¼	ಸರ್ವೆ ನಂ. 92 ರೈಲ್ವೇ ರಸ್ತೆ ಖರಾಬು ಜಮೀನು	ಸರ್ವೆ ನಂ. 93 2	ಸರ್ವೆ ನಂ. 93 2	ಡಿಟೋ
				ಸಿದ್ಧಲಿಂಗಯ್ಯ	93 — 2	ಡಿಟೋ	1 15	9 8	0 8¼	ಸರ್ವೆ ನಂ. 92 2	ಸರ್ವೆ ನಂ. 91	ಸರ್ವೆ ನಂ. 94 2	ಸರ್ವೆ ನಂ. 92 ರೈಲ್ವೆ ರಸ್ತೆ ಖರಾಬ್ ಜಮೀನು
				ಸೈಯದ್ ಅಮ್ಮದ್ ಖಲಾರ್.	94 — 2	ಡಿಟೋ	3 0	20 12	0 1¾	ಸರ್ವೆ ನಂ. 94 2	ಸರ್ವೆ ನಂ. 91	ಸರ್ವೆ ನಂ. 94 2	ಸರ್ವೆ ನಂ. 92

E